ಗುರಿ ಮಾಡಬೇಕಾಗಿರುತಕ್ಕದ್ದು ಸರ್ಕಾರದ ಕರ್ತವ್ಯ. ಈ ರೀತಿ ಮನುಷ್ಯರ ಜೀವದ ಜೊತೆ ಚಿಲ್ಲಾಟ ಆಡತಕ್ಕದ್ದಕ್ಕೆ ಯಾವುದೇ ಅಧಿಕಾರಿ ಆಗಲಿ, ಯಾರೇ ಆಗಲಿ, ಅವರು ಎಷ್ಟೆ ದೊಡ್ಡವರು ಇರಲಿ, ಅದಕ್ಕೆ ಅವಕಾಶ ಇಲ್ಲದೆ ಮತ್ತು ಆಗಿರತಕ್ಕ ಲೋಪ ಏನು ಇದೆ ಅಲೋಪ ಇದ್ದರೆ ಸರ್ಕಾರ ಉಗ್ರವಾದಂತಹ ಕ್ರಮ ತೆಗೆದುಕೊಳ್ಳುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ ಮತ್ತು ಅಲ್ಲಿ ಮಡಿದಿರತಕ್ಕವರಿಗೆ ಪರಿಹಾರ ಕೊಡಬೇಕು ಎಂಬ ವಿಚಾರವನ್ನೂ ಸಹ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಸಾಮಾನ್ಯವಾಗಿ ಇಂತಹ ಘಟನೆಗಳು ನಡೆದಂತಹ ಕಾಲದಲ್ಲಿ ಸರ್ಕಾರ ಏನು ಕ್ರಮವನ್ನು ಅನುಸರಿಸುತ್ತದೆಯೇ ಅಂತಹ ಕ್ರಮವನ್ನು ಇಲ್ಲೂ ಸಹ ಅನುಸರಿಸುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

(xiii) ಚಿಕ್ಕ ಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಲೈವ್ ಬ್ಯಾಂಡ್

ಶ್ರೀ ಪಿ. ಎಸ್. ಪ್ರಕಾಶ್ (ಚಿಕ್ಕಪೇಟೆ) : ಸನ್ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಮತ್ತೆ ಈ ಲೈವ್ ಬ್ಯಾಂಡುಗಳು ಪ್ರಾರಂಭ ಆಗಿದೆ. ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಅವಿನ್ನೂ ರಸ್ತೆ ತಿರುವಿನಲ್ಲಿ ಆಸ್ಪತ್ರೆ ರಸ್ತೆ ಎಂಬ ತಿರುವು ಇದೆ. ಅಲ್ಲಿ ಕೆಳಗಡೆ ಖಾದಿ ಭಂಡಾರ, ಮೊದಲನೇ ಮಹಡಿಯಲ್ಲಿ ಸಂಗೀತಾ ಬಾರ್ ಎಂದು ಇದೆ. ಎರಡನೇ ಮಹಡಿಯಲ್ಲಿ ಸಂಗೀತಾ ಲೈವ್‌ಬ್ಯಾಂಡ್ ಎಂದು ಹೇಳಿ ಒಂದು ಲೈವ್ ಬ್ಯಾಂಡ್ ನಡೆಯುತ್ತಿದೆ. ಕಳೆದ 15 ದಿವಸಗಳಿಂದ ಸಂಜೆ 7-30ಕ್ಕೆ ಪ್ರಾರಂಭ ಆದರೆ ರಾತ್ರಿ ಹನ್ನೆರಡು ಒಂದು ಗಂಟೆಯವರೆಗೆ ಈ ಲೈವ್ ಬ್ಯಾಂಡು ಹಾಡುಗಳನ್ನು ಹಾಡುತ್ತಾ ಅಕ್ಕಪಕ್ಕದ ಮನೆಯವರಿಗೆ ತೊಂದರೆ ಕೊಡುತ್ತಾ ಇದೆ. ಈಗಾಗಲೇ ಎಸ್‌ಎಸ್‌ಎಲ್‌ಸಿ ಎಕ್ಸಾಮಿನೇಷನ್ಸ್ ಪ್ರಾರಂಭ ಆಗಿದೆ. ಅವರೆಲ್ಲರೂ ಬಂದು ಗಲಾಟೆ ಮಾಡಿದಾಗ ಅಕ್ಕ ಪಕ್ಕದ ಮನೆಯವರು ಯುವಕ ಯುವತಿಯರು ಜೋರಾಗಿ ಕಿರುಚಿಕೊಂಡು ಹಾಡು ಹೇಳಿಕೊಂಡು ಡಾನ್ಸ್ ಮಾಡುತ್ತಿರುತ್ತಾರೆ. ಇದರ ಬಗ್ಗೆ ಕೇಳಿದಾಗ ಕೆಲವು ಗೂಂಡಾಗಳು, ರೌಡಿಗಳು, ದಲ್ಲಾಳಿಗಳು ಸೇರಿಕೊಂಡು ಆ ಯುವಕರೆಲ್ಲರನ್ನೂ ಹೊಡೆದು ಕಳುಹಿಸಿದ್ದಾರೆ. ಇದರ ಬಗ್ಗೆ ಪೋಲೀಸ್ ಕಮೀಷನರ್ ಅವರಿಗೆ ಅನೇಕ ದೂರುಗಳನ್ನು ಕೊಟ್ಟರೂ ಕೂಡ ಯಾವುದೇ ಕ್ರಮವನ್ನು ಇದುವರೆಗೂ ತೆಗೆದುಕೊಂಡಿಲ್ಲ. ಇದರಿಂದ ಅಲ್ಲಿರತಕ್ಕಂಥ ನಾಗರೀಕರಿಗೆ ಬಹಳಷ್ಟು ತೊಂದರೆ ಆಗುತ್ತಿದೆ. ಆ ಸಂಗೀತಾ ಲೈವ್‌ಬ್ಯಾಂಡ್ ಎದುರುಗಡೆ ಒಂದು ದೇವಸ್ಥಾನ ಇದೆ. ಮತ್ತೆ ಪಕ್ಕದಲ್ಲಿ ಖಾದಿ ಭಂಡಾರ ಇದೆ. ಇಷ್ಟು ಇದ್ದರೂ ಇಲ್ಲಿ ಅಕ್ಕಪಕ್ಕದ ಮನೆಗಳು ಇವೆ. ಇಲ್ಲಿ ಇದಕ್ಕೆ ಪರವಾನಗಿ ಕೊಟ್ಟಿರುವುದರಿಂದ ಅಲ್ಲಿರತಕ್ಕ ನಾಗರೀಕರಿಗೆ, ಸ್ಥಳೀಯ ನಿವಾಸಿಗಳಿಗೆ ಬಹಳ ತೊಂದರೆ ಆಗಿದೆ. ಇದರ ಬಗ್ಗೆ ಏನು ಕ್ರಮವನ್ನು ತಾವು ತೆಗೆದುಕೊಳ್ಳುತ್ತೀರಿ ಎಂದು ಸಂಬಂಧಪಟ್ಟವರಿಂದ ಉತ್ತರವನ್ನು ಕೊಡಿಸಬೇಕು.

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ಅಲ್ಲಿ ಬಾರ್‌ಗೆ ಲೈಸನ್ಸ್ ಕೊಟ್ಟಿರತಕ್ಕದ್ದು ಅಲ್ಲಿ ಖಾದಿ ಭಂಡಾರ ಇದೆ, ಸುತ್ತಲೂ ಮನೆಗಳು ಇದ್ದಾವೆ. ಜನ ವಾಸ ಮಾಡತಕ್ಕಂಥ ಪ್ರದೇಶ ಎಂದೂ ಸಹ ಹೇಳಿದ್ದಾರೆ.ಅದು ಎಕ್ಸೈಜ್ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಅಬಕಾರಿ ನಿಯಮಾವಳಿಗಳ ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವ ಬಗ್ಗೆ ಮಾನ್ಯ ಅಬಕಾರಿ ಸಚಿವರ ಗಮನಕ್ಕೆ ತರುತ್ತೇನೆ ಮತ್ತೆ ಲೈವ್ ಬ್ಯಾಂಡ್ ವಿಚಾರ. ಇದು ಬಹಳ ವರ್ಷಗಳಿಂದ ಬೆಂಗಳೂರಿನಲ್ಲಿ ಚರ್ಚೆ ಕೂಡ ನಡೆದಿದೆ. ಅದನ್ನು ತಡೆಗಟ್ಟಿದ್ದೂ ಕೂಡ ಉಂಟು. ಇತ್ತೀಚೆಗೆ ಮಾನ್ಯ ಸದಸ್ಯರಾದ ಪ್ರಕಾಶ್ ಅವರ ಪ್ರಕಾರ ಅದಕ್ಕೆ ಪರವಾನಗಿಯನ್ನು ಕೊಟ್ಟಿದ್ದಾರೆ ಎನ್ನತಕ್ಕದ್ದನ್ನು ಹೇಳುತ್ತಿದ್ದಾರೆ. ಅದರ ಪೂರ್ಣ ವಿಚಾರ ನನಗೆ ಗೊತ್ತಿಲ್ಲ. ಆ ವಿಚಾರದ ಬಗ್ಗೆ ಬೆಂಗಳೂರು ನಗರದ ಪೋಲೀಸ್ ಕಮೀಷನರ್ ಅವರಿಗೆ ತಿಳಿಸಿ ಕಾನೂನು ರೀತಿಯ ಅಗತ್ಯ ಕ್ರಮವನ್ನು ಕೈಗೊಳ್ಳತಕ್ಕ ಅವಶ್ಯ ಸೂಚನೆಯನ್ನು ಸರ್ಕಾರ ನೀಡುತ್ತದೆ ಎನ್ನತಕ್ಕ ಭರವಸೆಯನ್ನು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಇಡುವುದಕ್ಕೆ ಇಚ್ಛೆ ಪಡುತ್ತೇನೆ.

xiv) ಮೈಸೂರು ನಗರದಲ್ಲಿರುವ ರಿಡ್ಜ ಹೌಸ್ ಬಗ್ಗೆ

ಶ್ರೀ ಇ. ಮಾರುತಿ ರಾವ್ ಪವರ್ (ನರಸಿಂಹರಾಜು) : ಮಾನ್ಯ ಅಧ್ಯಕ್ಷರೆ, ಮೈಸೂರು ನಗರದ ಗಾಯತ್ರಿ ಪುರಂ ಬಡಾವಣೆ ವ್ಯಾಪ್ತಿಗೆ ಬರುವಂತಹ ಸ್ಥಳದಲ್ಲಿ ಪೋಲೀಸ್ ಆಯುಕ್ತರ ಕಛೇರಿ ಪಕ್ಕದಲ್ಲಿ ರಿಡ್ಜ್ ಹೌಸ್ ಎಂದು ಹೇಳಿ ರಸ್ತೆಯ ಪಕ್ಕದಲ್ಲಿ ಸಾರ್ವಜನಿಕರಿಗೆ ಒಂದು ರಸ್ತೆ ಮಾಡಬೇಕು ಎಂಬ ದೃಷ್ಟಿಯಿಂದ ಮೈಸೂರು ನಗರಪಾಲಿಕೆಯವರು ಈಗಾಗಲೇ ರಸ್ತೆಯನ್ನು ನಿರ್ಮಾಣ ಮಾಡಿ ಅರ್ಧಕ್ಕೆ ನಿಲ್ಲಿಸಿದ್ದಾರೆ. ಕಾರಣ, ಹಿಂದಿ ಇದ್ದಂತಹ ನಗರಪಾಲಿಕೆಯ ಆಯುಕ್ತರು ಮತ್ತು ಪೋಲೀಸ್ ಕಮೀಷನರ್ ಅವರ ಮಧ್ಯೆ ಇದ್ದಂತಹ ಒಂದು ವಿರಸ, ಸಾರ್ವಜನಿಕರಿಗೆ ರಸ್ತೆ ಆಗುವುದರಲ್ಲಿ ಒಂದು ತಡೆ ಆಗಿತ್ತು. ಅಲ್ಲಿ ಪೋಲೀಸ್ ಆಯುಕ್ತರು ಒಂದು ಬೇಲಿಯನ್ನೂ ಸಹ ಹಾಕಿಕೊಂಡು ಸಾರ್ವಜನಿಕರಿಗೆ ಅನುಕೂಲ ಆಗುವಂತಹ ಒಂದು ರಸ್ತೆ ಮಾಡುವುದರಲ್ಲಿ ವಿಫಲರಾಗಿದ್ದಾರೆ. ನಾನು ಈ ದೃಷ್ಟಿಯಿಂದ ತಮ್ಮ ಮೂಲಕ ನಮ್ಮ ಪೌರಾಡಳಿತ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ : ಅಧ್ಯಕ್ಷರೇ, ಮೈಸೂರು ನಗರದಲ್ಲಿರುವ ರಿಡ್ಜ್ ಹೌಸ್, ಕರ್ನಾಟಕ ಸರ್ಕಾರದ ಒಂದು ವಿಶಾಲ ಬಂಗಲೆ, ಸದರಿ ಕಟ್ಟಡವನ್ನು ಈ ಹಿಂದೆ ಭಾರತ ಸರ್ಕಾರದ ರಕ್ಷಣೆ ಇಲಾಖೆಯ ಏರ್‌ಫೋರ್ ಸೆಲೆಕ್ಷನ್ ಬೋರ್ಡ್ ಕಛೇರಿ ಹಾಗೂ ಮೆಸ್ ನಡೆಸುವ ಸಲುವಾಗಿ ಲೀಸ್ ಮೇಲೆ ಕೊಡಲಾಗಿತ್ತು. ಏರ್‌ಫೆಲಾರ್ಸ್